ಸಿಸಿ ಸಂಖ್ಯೆ- **545/2022** ಪಿ.ಡಬ್ಲ್ಯೂ:-1

ದಿನಾಂಕಃ **13-01-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ಆರೋಪಿಯು ಡಿ ಸಿ ಸಿ ಬ್ಯಾಂಕ್ ನ ವ್ಯವಸ್ಥಾಪಕರಾಗಿದ್ದು ನಾನು ಸದರಿ ಬ್ಯಾಂಕ್ ನಲ್ಲಿ ಹಣವನ್ನು ಡೆಪಾಸಿಟ್ ಇಟ್ಟಿದ್ದೇನು. ಆ ಸಮಯದಲ್ಲಿ ಆರೋಪಿಯು ತಮ್ಮ ಬ್ಯಾಂಕ್ ನಲ್ಲಿ ಬಡ್ಡಿ ಕಡಿಮೆ ಬರುತ್ತದೆ ನನಗೆ ಕೊಡಿ ನಾನು ಜಾಸ್ತಿ ಬಡ್ಡಿ ಕೊಡುತ್ತೇನೆ ಎಂದು ಹಣವನ್ನು ನನ್ನಿಂದ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆದ್ದರಿಂದ ಆರೋಪಿ ನನಗೆ ಗೊತ್ತು. ಸದರಿ ವಿಚಾರವನ್ನು ತಿಳುವಳಿಕೆ ಪತ್ರದಲ್ಲಾಗಲೀ, ಪೀರ್ಯಾದುವಿನಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ. ನಾನು ಆರೋಪಿಯ ಬ್ಯಾಂಕ್ ನಲ್ಲಿ ರೂ.8,00,000/- ಹಣವನ್ನು ಎಫ್ ಡಿ ಇಟ್ಟಿದ್ದೆನು. ಸದರಿ ವಿಚಾರವನ್ನು ತಿಳುವಳಿಕೆ ಪತ್ರದಲ್ಲಾಗಲೀ, ಪೀರ್ಯಾದುವಿನಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ಚಕ್ಕಿನ ಮುಖಾಂತರ ಕೊಟ್ಟಿದ್ದೆನು. ಆರೋಪಿಗೆ ನಾನು ಚಕ್ಕಿನ ಮೂಲಕ ಹಣವನ್ನು ಕೊಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ಚಕ್ಕಿನ ಮುಖಾಂತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಬ್ಯಾಂಕ್ ನಲ್ಲಿ ಹಣವನ್ನು ಎಫ್ ಡಿ ಇಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.